**International Journal of Academic Research**
**ISSN: 2348-7666; Vol.3, Issue-1(2), January, 2016**
**Impact Factor: 3.075; Email: drtvramana@yahoo.co.in**

# ಧಾರಾವಾಹಿಗಳಲ್ಲಿ ಬಹುಮುಖಿ ಸಮಾಜದ ಸಾಂಸ್ಕೃತಿಕ ಚಹರೆಗಳ ಕಣ್ಮರೆ

**(The Disappearance of Cultural traits of a Multi-faceted Society in Serials)**

**Chandrakala . M**
Assistant professor
Dept of Kannada
GFGC Devanahalli-562110
Email: chandrakalam33@gmail.com
Mobile: 09900330466

## ಪೀಠಿಕೆ

ಭಾರತೀಯ ಸಮಾಜವು ಹಲವಾರು ಭಿನ್ನ ಭಿನ್ನ ಭಾಷೆ, ಜಾತಿ, ವರ್ಗ, ವರ್ಣ, ಹಬ್ಬ, ಧರ್ಮ, ವೃತ್ತಿ ನಂಬಿಕೆಗಳು ಮತ್ತು ಜೀವನವಿಧಾನಗಳನ್ನು ಒಳಗೊಂಡ ಬೇರೆ ಬೇರೆ ಜನಸಮುದಾಯದಿಂದ ಕೂಡಿದೆ. ಅಂದರೆ ಇಲ್ಲಿನ ಜನರ ಭಾಷಾ ಬಳಕೆಯ ಕ್ರಮ, ಸ್ತ್ರೀ ಪುರುಷರ ನಡುವಿನ ಸಂಬಂಧಾಂತರಗಳು ಮತ್ತು ಸ್ಥಾನಮಾನಗಳು ದೈವದ ಬಗೆಗಿನ ನಂಬಿಕೆಗಳು, ಪ್ರತಿಯೊಂದು ಜಾತಿ, ಸಮುದಾಯ, ಪ್ರದೇಶ ಮೊದಲಾದವುಗಳ ಸಾಮಾಜಿಕ ನಡೆನುಡಿಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಹಾಗೆಯೇ ಸಂಸ್ಕೃತಿಯೂ ಕೂಡ. ಪ್ರತಿಯೊಂದು ಸಮುದಾಯವು ತನ್ನದೆ ಆದ ಸಾಂಸ್ಕೃತಿಕ ಅನನ್ಯತೆ ಮತ್ತು ಅಸ್ಮಿತೆಗಳಿಂದ ಕೂಡಿರುತ್ತದೆ. ಹಾಗಾಗಿ ಇಲ್ಲಿನ ಸಂಸ್ಕೃತಿ ಕೇವಲ ಏಕಾಕೃತಿಯ ರಚನೆಯಾಗಿರದೇ ಬಹುಮುಖಿ ನೆಲೆಗಳಿಂದ ಕೂಡಿದೆ. ಯಾವುದೇ ಕಲಾಪ್ರಕಾರಗಳು ಅಲ್ಲಿನ ಜನಸಮುದಾಯದ ಸಾಂಸ್ಕೃತಿಕ ಬದುಕಿನ ನೆಲೆಗಳನ್ನು ಅನಾವರಣಗೊಳಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಈ ನಿಟ್ಟಿನಲ್ಲಿ ಮಾಧ್ಯಮ ಪಠ್ಯಗಳಲ್ಲಿ ಒಂದಾದ ಸಮಕಾಲೀನ ಧಾರಾವಾಹಿಗಳು ಹೇಗೆ ಸಮುದಾಯದ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸುತ್ತದೆ ಎಂಬುದನ್ನು ಕನ್ನಡದ ವಿವಿಧ ವಾಹಿನಿಗಳಲ್ಲಿ ಪ್ರಸಾರಗೊಂಡ ಧಾರಾವಾಹಿಗಳ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವನ್ನು ಮಂಡಿಸಲಾಗಿದೆ.

## ಅಧ್ಯಯನದ ಉದ್ದೇಶ

- ಜಾಗತಿಕ ಸಂಸ್ಕೃತಿಯೊಂದರ ಆಗಮನದಿಂದ ಇಲ್ಲಿನ ಬಹುಮುಖಿ ಸಮಾಜದ ಸಾಂಸ್ಕೃತಿಕ ಚಹರೆಗಳು ಕ್ರಮೇಣ ತಮ್ಮ ಅಸ್ಮಿತೆಗಳನ್ನು ಕಳೆದುಕೊಂಡು ಏಕರೂಪಿ ಸಂಸ್ಕೃತಿಯೊಂದು ಮೈದಾಳುತ್ತಿದೆ ಎಂಬ ಆತಂಕಗಳು ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ ಮಾಧ್ಯಮ ಪಠ್ಯಗಳಲ್ಲಿ ಒಂದಾದ ಧಾರಾವಾಹಿಗಳ ಪಾತ್ರ ಏನು ಎಂಬುದನ್ನು ಅರಿಯುವುದು.

- ಧಾರಾವಾಹಿಗಳಲ್ಲಿ ಮಹಿಳೆಯರ ಪ್ರತಿನಿಧೀಕರಣದ ಸ್ವರೂಪವನ್ನು ಅರಿಯುವುದು.

- ಜಾತಿ-ವರ್ಗ, ಬಣ್ಣ, ಬಾಷೆ ಮತ್ತು ಸೌಂದರ್ಯಗಳ ಸ್ವರೂಪವನ್ನು ಕುರಿತ ಗ್ರಹಿಕೆಗಳು.

## ಅಧ್ಯಯನದ ಸ್ವರೂಪ

'ಕಲೆ ಜೀವನದ ಅನುಕರಣೆ' (Art is an immitation of life) ಎಂಬ ಮಾತಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಕಲೆಯ ಒಂದು ಪ್ರಕಾರ ಎಂದು ಗುರುತಿಸುವಂತೆ ಕಿರುತೆರೆಯ ಧಾರಾವಾಹಿಗಳನ್ನೂ ಕೂಡ ಜನಪ್ರಿಯ ಕಲೆಯ ಭಾಗವೆಂದೇ ಗುರುತಿಸಬಹುದು. ಯಾವುದೇ ಕಲಾ ಪ್ರಕಾರಗಳು ತನ್ನ ಸುತ್ತಲ ಸಮಾಜದ ಭಾಷಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ತವಕ ತಲ್ಲಣಗಳು ಮತ್ತು ಪ್ರತಿಕ್ರಿಯೆಗಳನ್ನು ದಾಖಲಿಸುವ ಹಾಗೂ ತನ್ನೊಳಗೆ ವಿಮರ್ಶಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಈ ನಿಟ್ಟಿನಲ್ಲಿ ಧಾರಾವಾಹಿಗಳ ಪಾತ್ರ ತುಂಬಾ ಮುಖ್ಯವಾಗಿದೆ.

"ಜನಪ್ರಿಯ ಸಂಸ್ಕೃತಿಗಳ ಭಾಗವಾದ ಧಾರಾವಹಿಗಳು ಬಹುಬೇಗ ಸಮಾಜದ ಮೇಲೆ ಪರಿಣಾಮ ಬೀರುತ್ತವೆ. ಇವು ಒಂದು ರೀತಿಯ ಸಮಾಜದ ಕನ್ನಡಿಗಳಾಗಿ ಕೆಲಸ ಮಾಡುತ್ತವೆ. ಹಾಗಾಗಿ ಸಮಷ್ಠೀ ಪ್ರಜ್ಞೆಯನ್ನು ಹೊಂದಿರುವ ಸಮಾಜವನ್ನು ಮತ್ತು ಸಮಾಜದಲ್ಲಾಗುವ ದಿನೇದಿನೇ ಬದಲಾವಣೆಗಳನ್ನು ಗ್ರಹಿಸುವ ಗುಣ ಹೊಂದಿದೆ."1

ಪ್ರಸ್ತುತ ಲೇಖನವು ಕನ್ನಡ ಕಿರುತೆರೆಯ ಕಥನಗಳ ಸ್ವರೂಪ ಮತ್ತು ಧಾರಾವಾಹಿಗಳಲ್ಲಿ ಬಿಂಬಿತವಾಗುವ ವಾಸ್ತವ ಸಮಾಜದ ರೂಪುರೇಷೆಗಳು, ಪ್ರಭಾವ ಮತ್ತು ಪ್ರೇರಣೆಗಳು ಹಾಗೂ ಪೂರ್ವಾಗ್ರಹಗಳು ಮತ್ತು ಜೀವನ ಕ್ರಮಗಳು ಯಾವ ರೀತಿಯಲ್ಲಿ ಬಿಂಬಿತಗೊಳ್ಳುತ್ತವೆ ಎಂಬುದನ್ನು ಈ ಲೇಖನ ಗುರುತಿಸಲೆತ್ನಿಸುತ್ತದೆ.

## ಮಹಿಳೆ ಮತ್ತು ಸಮಾಜ

ಧಾರಾವಾಹಿಗಳಿಗೂ ಮತ್ತು ಮಹಿಳೆಯರಿಗೂ ಎಲ್ಲಿಲ್ಲದ ನಂಟು. ಸಿನಿಮಾದಲ್ಲಿನ ಕಥಾನಕವು ನಾಯಕ ಪ್ರಧಾನವಾದರೆ, ಧಾರಾವಾಹಿಗಳು ಸ್ತ್ರೀ ಪ್ರಧಾನವಾದ ಕಥಾನಕವಾಗಿರುತ್ತದೆ. ಕಾರಣ ಧಾರಾವಾಹಿಗಳ ವೀಕ್ಷಕರು ಹೆಚ್ಚಾಗಿ ಮಹಿಳೆಯರೇ ಆಗಿರುತ್ತಾರೆ. "ಮಾಧ್ಯಮವು ತನ್ನ ಉದ್ದೇಶಿತ ವೀಕ್ಷಕರಾಗಿ ಮತ್ತು ಗ್ರಾಹಕರಾಗಿ ಹಾಗೂ ಗ್ರಾಹಕರನ್ನು ಆಕರ್ಷಿಸುವ ವಸ್ತುವಾಗಿ ಅಂದರೆ, ಏಕ ಕಾಲಕ್ಕೆ ಅದು ತನ್ನೆಲ್ಲಾ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದು ಮಹಿಳೆಯರಿಂದಲೇ".2 ಸಮಕಾಲೀನ ಸಂದರ್ಭದಲ್ಲಿ ಹೆಣ್ಣು ಒಂದು ಸರಕು ಎಂದು ಪರಿಗಣಿಸಲ್ಪಟ್ಟಿದ್ದು, ಈ ವಿಷಯದಲ್ಲಿ ಧಾರಾವಾಹಿಗಳು ತಮ್ಮ ಉದಾರನೀತಿಯನ್ನು ತಳೆದಿವೆ. 'ಹೆಣ್ಣು ಎಂದರೆ ಹೇಗಿರಬೇಕು? ಮತ್ತು ಹೀಗೆಯೇ ಇರಬೇಕು' ಎಂಬ ಸಿದ್ಧಾಂತವನ್ನು ಪ್ರಚುರಪಡಿಸುತ್ತವೆ.

## ಧಾರಾವಾಹಿಗಳ ವಿಧಗಳು

1. ಕಥಾನಾಯಕಿಯರ ಹೆಸರಿನಿಂದಲೇ ಕರೆಯಲ್ಪಡುವ ಧಾರಾವಾಹಿಗಳು (ಉದಾ: ಕಾದಂಬರಿ, ಕನಕ, ರಾಧಾ, ಕಲ್ಯಾಣಿ, ಅರುಂಧತಿ, ಲಕ್ಷ್ಮಿ, ಯಶೋಧೆ ಇತ್ಯಾದಿ)

2. ಆದರ್ಶ ಸ್ತ್ರೀತ್ವದ ಪ್ರತೀಕಗಳಿಂದಲೇ ಗುರುತಿಸಲ್ಪಡುವ ಧಾರಾವಾಹಿಗಳು (ಉದಾ: ಕುಂಕುಮ ಭಾಗ್ಯ,, ಮಾಂಗಲ್ಯ, ಮುತ್ತೈದೆ, ಕನ್ಯಾದಾನ, ಕುಲವಧು, ಅಗ್ನಿಸಾಕ್ಷಿ, ಕುಲವಧು ಇತ್ಯಾದಿ)

3. ಆಶಯ ಪ್ರಧಾನವಾದ ಧಾರಾವಾಹಿಗಳು (ಉದಾ: ಮುಕ್ತ, ಮಾಯಾಮೃಗ, ಮನ್ವಂತರ, ರಂಗೋಲಿ, ಪುಣ್ಯಕೋಟಿ, ಸಂಬಂಧ, ಚಕ್ರವಾಕ, ಮಳೆಬಿಲ್ಲು ಇತ್ಯಾದಿ)

4. ಹಾಸ್ಯ ಪ್ರಧಾನವಾದ ಧಾರಾವಾಹಿಗಳು ಮತ್ತು ಪತ್ತೆಧಾರಿ ಧಾರಾವಾಹಿಗಳು

(ಉದಾ: ಸಿಲ್ಲಿ ಲಲ್ಲಿ, ಪಾಪ ಪಾಂಡು, ಪಾರ್ವತಿ ಪರಮೇಶ್ವರ, ರೋಬೋ ಫ್ಯಾಮಿಲಿ ಇತ್ಯಾದಿ)

5. ಮಹಾ ಕಾವ್ಯ, ಪುರಾಣದ ಕಥಾವಸ್ತುವನ್ನು ಆಧರಿಸಿದ ಧಾರಾವಾಹಿಗಳು.
(ಸೀತೆ, ಮಹಾಭಾರತ, ಶ್ರೀನಿವಾಸ ಕಲ್ಯಾಣ, ಇತ್ಯಾದಿ)

ಮೊದಲ ಮೂರು ರೀತಿಯ ಧಾರಾವಾಹಿಗಳಲ್ಲಿ ಹೆಣ್ಣು ಪ್ರಧಾನ ಪಾತ್ರವಾಗಿದ್ದು, ಮೇಲ್ನೋಟಕ್ಕೆ ಬೇರೆಬೇರೆಯಾಗಿಯೇ ಕಂಡುಬಂದರೂ ಆಶಯ ಒಂದೇ ಆಗಿರುತ್ತದೆ. ಇಲ್ಲಿನ ಕೇಂದ್ರ ಪಾತ್ರ ಉದಾತ್ತ ಮತ್ತು ಆದರ್ಶ ನಾಯಕಿಯಾಗಿ ಚಿತ್ರಿಸಲ್ಪಟ್ಟಿರುತ್ತದೆ. ಅಂದರೆ ಪರಂಪರಾನುಗತವಾದ ಸ್ಥಿರಮಾದರಿಯಲ್ಲಿಯೇ ಬಿಂಬಿಸಲ್ಪಡುವ ಇಲ್ಲಿನ ಸ್ತ್ರೀ ಪಾತ್ರಗಳು ತ್ಯಾಗ, ಪ್ರೇಮ, ಸಹನೆ, ಕರುಣೆ, ಮತ್ತು ಕ್ಷಮಾಶೀಲ ಗುಣಗಳಿಂದಲೇ ರೂಪಿಸಲ್ಪಟ್ಟಿರುತ್ತಾರೆ. ಕುಟುಂಬ ಕೇಂದ್ರಿತವಾಗಿರುವುದರಿಂದ ಇಲ್ಲಿ ಹೆಣ್ಣು ಕುಟುಂಬದೊಳಗೇ ಬಂಧಿಯಾಗುವ ಪರಿ ರೋಚಕವಾದುದು. ಕುಟುಂಬದ ರೀತಿರಿವಾಜುಗಳನ್ನು ಒಪ್ಪಿಕೊಂಡು ಅದರ ಮಾದರಿಯಾದರೆ ಗಂಡನ ಕುಡುಕುತನ, ಬಹುಪತ್ನಿತ್ವ, ಹಾದರ, ಅನುಮಾನ, ಹೊಡೆತ, ಬೈಗುಳಗಳನ್ನು ಒಪ್ಪಿಕೊಂಉ ಸಹಿಸಿಕೊಳ್ಳುವುದು ಇನ್ನೊಂದು ಮಾದರಿ. ಉದಾಹರಣೆಗೆ ರಂಗೋಲಿಯ ಸಂಗೀತ, ಚಕ್ರವಾಕದ ಪುಷ್ಪ, ರಥಸಪ್ತಮಿಯ ಶ್ರದ್ಧಾ, ಕಲ್ಯಾಣಿ ಇತ್ಯದಿ. ಹಾಗೆಯೇ 'ಕುಟುಂಬದ ಉದ್ಧಾರ ಮತ್ತು ಅಧೋಗತಿಗೆ ಹೆಣ್ಣೇ ಕಾರಣ' ಎಂಬುದನ್ನು ಇವುಗಳು ಪರೋಕ್ಷವಾಗಿ ತಿಳಿಸಲೆತ್ನಿಸುತ್ತವೆ.

ಸಾಮಾನ್ಯವಾಗಿ ಧಾರಾವಾಹಿಗಳ ಹೆಣ್ಣುಗಳನ್ನು ಚಿತ್ರಿಸಿರುವುದು ಊಳಿಗಮಾನ್ಯ ಪದ್ಧತಿಯ ನಿಟ್ಟಿನಲ್ಲಿ. ಮಹಿಳೆಯನ್ನು ಗ್ಲಾಮರಸ್ ಆಗಿ ತೋರಿಸುವುದೂ ಸಹ ಯಜಮಾನಿಕೆಯ ರೀತಿಯೇ"3 ಎಂಬ ಡಾ. ಕೆ. ಮರುಳಸಿದ್ಧಪ್ಪರವರ ಮಾತು ಉತ್ಪ್ರೇಕ್ಷೆಯಲ್ಲ. ಮತ್ತೊಂದು ಮುಖ್ಯಾಂಶವೆಂದರೆ ಖಳನಾಯಕಿಯರ ಸೃಷ್ಟಿ. ಇವರು ಶೋಷಿಸುವುದೂ ಕೂಡ ಇನ್ನೊಬ್ಬ ಮಹಿಳೆಯನ್ನು. ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದೇ ಇಲ್ಲಿನ ಮೂಲಮಂತ್ರವಾಗಿದೆ. ಇವೆಲ್ಲವುಗಳ ನಡುವೆ ಒಡೆದು ಅಪೂರ್ವ

ಸಂಗತಿಯೆಂದರೆ ಪರಂಪರಾನುಗತ ಚೌಕಟ್ಟುಗಳಿಗೆ ಸಿಲುಕಿ ಹೆಣ್ಣು ಕೇವಲ ನಾಲ್ಕು ಗೋಡೆಗಳ ನಡುವೆಯೇ ಬಂಧಿಯಾಗಿರುವುದರ ಬದಲು, ತನ್ನ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸಿವೆ. ಅಂದರೆ ದುಡಿಯುವ ವರ್ಗದ ಹೆಣ್ಣುಗಳನ್ನು ಚಿತ್ರಿಸುವ ಮೂಲಕ ಆಕೆ ಏನನ್ನು ಬೇಕಾದರೂ ಸಾಧಿಸಬಲ್ಲಳುಎಂಬ ಆತ್ಮವಿಶ್ವಾಸವನ್ನು ಮೂಡಿಸುತ್ತಲೇ, ಮತ್ತೆ ಅವರನ್ನು ಪರಂಪರಾನುಗತ ಖೆಡ್ಡಾದೊಳಕ್ಕೆ ಬೀಳಿಸುತ್ತವೆ.

ಪೂರ್ವಾಗ್ರಹಗಳನ್ನು ಅಥವಾ ಮಿಥ್‌ಗಳನ್ನು ಒಡೆಯುವ ಕೆಲಸವನ್ನು ಧಾರಾವಾಹಿಗಳು ಮಾಡಿವೆ. ಅಂದರೆ ಗಂಡಿನ ಅಹಂಕಾರ ಮತ್ತು ಸ್ವಾರ್ಥ ದಬ್ಬಾಳಿಕೆಯ ವಿರುದ್ಧ ತಲೆಯೆತ್ತಿ ನಿಲ್ಲುವುದು (ರಂಗೋಲಿ), ಸ್ವತಂತ್ರ ಉದ್ಯಮ ನಡೆಸುವುದು (ಕಲ್ಯಾಣಿ), ಬಾಡಿಗೆ ತಾಯ್ತನ (ಮಳೆಬಿಲ್ಲು) ಇತ್ಯಾದಿ. ಒಟ್ಟಿನಲ್ಲಿ ಸ್ಥಾಪಿತ ಅಧಿಕಾರಗಳ ಐಕಾನ್‌ಗಳನ್ನು ಒಡೆಯುವ ಮೂಲಕ ಅವುಗಳನ್ನು ಮತ್ತೆ ತನಗೆ ಅನುಕೂಲವಾಗುವಂತೆ ಪುನರ್ ರೂಪಿಸಿಕೊಳ್ಳುವ ಪರಂಪರೆಯ ಭಾಗವಾಗಿಯೂ ಕಂಡುಬರುತ್ತದೆ.

## ವರ್ಗ

ಬಹುತೇಕ ಎಲ್ಲಾ ಧಾರಾವಾಹಿಗಳು ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಗಳ ಜೀವನವನ್ನು ಪ್ರತಿನಿಧಿಸುತ್ತವೆ. ಯಾವುದೇ ಕೆಳವರ್ಗಗಳನ್ನು ಗಣನೆಗೆ ತೆಗೆದುಕೊಳ್ಳವುದಿಲ್ಲ. ಶ್ರಮಕೇಂದ್ರಿತ ಕಸುಬುಗಳು, ಅಸಂಘಟಿತ ವಲಯಗಳ ಕಸುಬುಗಳ ಬಗ್ಗೆ ಜಾಣಮರೆವನ್ನು ತೋರಿಸುತ್ತವೆ. ಇವುಗಳ ಬದಲಿಗೆ ವ್ಯಾಪಾರ ವ್ಯವಹಾರ ಮತ್ತು ದೊಡ್ಡ ಉದ್ಯಮವೊಂದರ ನಿರ್ವಹಣೆಯನ್ನು ಮಾತ್ರ ಕೆಲಸ ಎಂದು ಭಾವಿಸುತ್ತಿರುತ್ತದೆ. ಹೀಗಾಗಿ ವ್ಯಾಪಾರ ವ್ಯವಹಾರಗಳ ನಡುವೆ ಉಂಟಾಗುವ ತೀವ್ರ ಸ್ಪರ್ಧೆಯ ನಡುವೆ ಉಂಟಾಗುವ ಮನುಷ್ಯ ಸಂಬಂಧದ ಸ್ವರೂಪವನ್ನು ಚಿತ್ರಿಸುತ್ತವೆ. ಬಹುತೇಕ ಧಾರಾವಾಹಿಗಳು ಸ್ವಂತ ಉದ್ಯಮ ನಡೆಸುವ ಮಾಲೀಕರ ಕಥೆಗಳಾಗಿವೆಯೇ ಹೊರತು ಕಾರ್ಮಿಕರ ಸಮಸ್ಯೆಗಳು ವೇತನ ಕ್ರಮಗಳು ಜೀವನ ಸ್ಥಿತಿಗಳನ್ನು ಒಳಗೊಂಡಿರುವುದಿಲ್ಲ. ಇನ್ನು ಭಾಷೆಯ ವಿಷಯದಲ್ಲಿ ಹೇಳುವುದಾದರೆ, ನಗರ ಕೇಂದ್ರಿತ ಭಾಷಾ ಸ್ವರೂಪವನ್ನು ಮತ್ತು ಮೇಲ್ವರ್ಗ ಅಥವಾ ಜಾತಿಯ ಮಧ್ಯಮ ವರ್ಗದ ಭಾಷಿಕ ರೂಪಗಳನ್ನು ಒಳಗೊಂಡಿರುತ್ತದೆ.

## ಜಾತಿ ಮತ್ತು ಸೌಂದರ್ಯಗಳ ಪರಿಕಲ್ಪನೆ

ಮಧ್ಯಮ ವರ್ಗದ ಬದುಕನ್ನು ಬಿಂಬಿಸುವ ಧಾರಾವಾಹಿಗಳು ಮೇಲ್ನೋಟಕ್ಕೆ ಯಾವುದೇ ಜಾತಿಯನ್ನು ಹೆಸರಿಸುವುದಿಲ್ಲ. ಆದರೆ ಕಥಾವಿವರಗಳನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಅದು ಸಮಾಜದ ಮೇಲ್ಜಾತಿಗೆ ಸೇರಿದ ಜನರ ಅನುಭವಲೋಕಗಳನ್ನು ಪ್ರತಿಬಿಂಬಿಸುತ್ತದೆ ಹಾಗೂ

ಸಾರ್ವತ್ರಿಕಗೊಳಿಸುತ್ತಿರುತ್ತದೆ. ಸಾಮಾನ್ಯವಾಗಿ ಧಾರಾವಾಹಿಗಳಲ್ಲಿನ ಮುಖ್ಯಪಾತ್ರಗಳ ನಾಮಸ್ರಚಿ (ಹೆಸರು) ಗಳು ಜಾತಿಸೂಚಕಗಳಾಗಿ ಕಂಡುಬರುವುದರ ಹಿನ್ನೆಲೆಯಲ್ಲಿ ಮತ್ತು ಆಯಾ ಜಾತಿಗಳ ಆಚಾರ-ವಿಚಾರಗಳನ್ನು ಪ್ರತಿನಿಧಿಸುವ ಕ್ರಮದಲ್ಲಿ ಇವುಗಳನ್ನು ಗುರುತಿಸುವುದು ಅಷ್ಟೇನೂ ಕಷ್ಟವಾಗದು. ಉದಾ: ಮಾಧವಿ ಪಟೇಲ್ (ಮುಕ್ತ), ಮನೆಯೊಂದು ಮೂರುಬಾಗಿಲು (ಆಶಾ ಭಾರಧ್ವಾಜ್), ರಥ ಸಪ್ತಮಿ (ಶ್ಯಾಮರಾವ್ ಕುಡ್ಲ, ಸುಶಾಂತ್ ಚಕ್ರವರ್ತಿ), ಇಂದ್ರ ನೀಲ ವರ್ಮ (ಚಕ್ರವಾಕ) ಇತ್ಯಾದಿ ಪಟ್ಟಿ ಬೆಳೆಯುತ್ತದೆ. ವಿಶೇಷವೆಂದರೆ ಕೆಳಜಾತಿ ಮತ್ತು ವರ್ಗಗಳ ಪ್ರಸ್ತಾಪವೇ ಇರದ ಧಾರಾವಾಹಿಗಳಲ್ಲಿನ ಕಥನಗಳಲ್ಲಿ ಕೆಳಸಮುದಾಯದಿಂದ ಬಂದ ಯಾವುದೇ ವ್ಯಕ್ತಿಯನ್ನು ಇದುವರೆವಿಗೂ ನಾಯಕ ಅಥವಾ ನಾಯಕಿಯ ಸ್ಥಾನದಲ್ಲಿ ಕಂಡುಬರುವುದು ಸಾಧ್ಯವಾಗಿಲ್ಲ. ವಿಪರ್ಯಾಸವೆಂದರೆ ಕೆಳಜಾತಿ ವರ್ಗಗಳ ಬಗೆಗೆ ಜಾಣಮೌನವನ್ನು ತಾಳುವ ಧಾರಾವಾಹಿಗಳು ಒಂದು ಬಗೆಯಾದರೆ, ಕೆಲವೊಂದು ರಿಯಾಲಿಟಿ ಶೋಗಳಲ್ಲಿ ಮಾತ್ರ ಪ್ಯಾಟೆಗ್ ಬಂದ ಕಾಡಿನ ಜನ ನಾಯಕರಾಗುತ್ತಾರೆ. ಅದೂ ಅವರಿಗೆ ನಗರಜೀವನವನ್ನು ಕಲಿಯುವಚಿತೆ ಮಾಡಿ, ನಗರ ಜೀವನಕ್ಕೆ ಪಳಗಿಸಿದ ಮೇಲೆ. ಪ್ರಧಾನ ಸಂಸ್ಕೃತಿಯೊಂದನ್ನು ಪ್ರತಿನಿಧಿಸುವ ಅಲ್ಲಿನ ಪಾತ್ರಗಳು ಅಲ್ಲಿನ ಸಂಪ್ರದಾಯಕ್ಕನುಗುಣವಾದ ಆಹಾರ ಕ್ರಮಗಳನ್ನೇ ಅನುಕರಿಸುತ್ತಿರುವುದು ಕಂಡುಬರುತ್ತದೆ. ಮಾಂಸಾಹಾರ ಮಧ್ಯ ಸೇವನೆಗಳ ದೃಶ್ಯಗಳು ಕೇವಲ ಖಳಪಾತ್ರಗಳಿಗೆ ಮಾತ್ರ ಮೀಸಲಾಗಿರುತ್ತದೆ. ಶಾಖಾಹಾರ ಸಂಹಿತೆಯೊಂದನ್ನು ಪರೋಕ್ಷವಾಗಿ ಪ್ರತಿನಿಧಿಸುವ ಇವುಗಳಲ್ಲಿ ಆಹಾರ ಮತ್ತು ಜಾತಿ ರಾಜಕಾರಣದ ಸಂಬಂಧಗಳನ್ನು ಗ್ರಹಿಸಬಹುದಾಗಿದೆ.

ಮೈಬಣ್ಣವೊಂದೇ ಸೌಂದರ್ಯ ನಿರ್ಧಾರದ ಮಾನದಂಡವಾಗಿಲ್ಲದಿದ್ದರೂ ಈ ವಿಚಾರದಲ್ಲಿ ಧಾರಾವಾಹಿಗಳಲ್ಲಿ ಸಾಕಷ್ಟು ಪೂರ್ವಾಗ್ರಹಗಳು ಇರುವುದು ಕಂಡುಬರುತ್ತದೆ. ಇಲ್ಲಿನ ಬಹುತೇಕ ಪಾತ್ರಗಳು ಬಿಳಿಯ ಮೈಬಣ್ಣವನ್ನೇ ಹೊಂದಿರುತ್ತವೆ ಇಲ್ಲವೇ ಹಾಗೆ ಹೋಲುವ ಮೇಕಪ್ ಹಾಕಲಾಗುತ್ತದೆ. ಕಪ್ಪು ಬಣ್ಣದ ಪಾತ್ರಧಾರಿಗಳು ತೆರೆಯ ಮೇಲೆ ಕಾಣುವುದು ತುಂಬಾ ವಿರಳ. ಒಂದು ವೇಳೆ ಕಂಡರೂ, ಅದು ಸಣ್ಣಪುಟ್ಟ ಮನೆಗೆಲಸದವರು, ಖಳನಾಯಕರು ಅಥವಾ ಹಾಸ್ಯಾಸ್ಪದ ವ್ಯಕ್ತಿಗಳಾಗಿರುತ್ತಾರೆ. ಕೇವಲ ಬಿಳಿಯ ಬಣ್ಣಕ್ಕಷ್ಟೇ ಪ್ರಾಧಾನ್ಯತೆಯನ್ನು ನೀಡಲಾಗಿದ್ದರೂ ಇದು ಗಂಡು ಹೆಣ್ಣುಗಳಿಬ್ಬರಿಗೂ ಸಮಾನವಾಗಿ ಅನ್ವಯಿಸುವುದಿಲ್ಲ. ಕೆಲವೊಮ್ಮೆ ನಾಯಕ ಕಪ್ಪುಬಣ್ಣವನ್ನು ಒಳಗೊಂಡಿದ್ದರೂ ನಾಯಕಿ ಮಾತ್ರ ಬಿಳಿ ಮೈಬಣ್ಣವನ್ನು ಹೊಂದಿರಲೇಬೇಕು. ಯಾವುದೇ ವ್ಯಕ್ತಿ ಕಪ್ಪುಬಣ್ಣವನ್ನು ಹೊಂದಿದ್ದರೂ ಮೇಕಪ್ ಮೂಲಕ ಅವರ ಯಾವುದೇ ನೈಜಬಣ್ಣವನ್ನು ತೆರೆಯ

ಮೇಲೆ ಕಾಣಿಸದೇ ಇರುವ ಹಾಗೆ ಬಿಂಬಿಸಲು ಸಾಧ್ಯವಿದೆ. ಆದರೂ ಕೂಡ ಪ್ರಧಾನ ಪಾತ್ರಗಳಲ್ಲಿ ಕಪ್ಪುಬಣ್ಣದ ಹುಡುಗಿಯರಿಗೆ ಅವಕಾಶ ತುಂಬಾ ವಿರಳ. ಈ ರೀತಿಯ ಬಣ್ಣದ ತಾರತಮ್ಯತೆಗೆ ಕಾರಣವೇನು ಎಂಬುದರ ಬಗ್ಗೆ ಲೋಹಿಯಾರವರು ತಮ್ಮ "Beauty and Skin Colour" ಎಂಬ ಲೇಖನದಲ್ಲಿ ಈ ರೀತಿ ಅಭಿಪ್ರಾಯಪಡುತ್ತಾರೆ :

"ಸೌಂದರ್ಯ ನಿರ್ಧಾರದ ಈ ಅಪಮಾರ್ಗಕ್ಕೆ ರಾಜಕಾರಣದ ಚೋದನೆಗಳೇ ಕಾರಣವಾಗಿವೆ. ರಾಜಕಾರಣ ಸೌಂದರ್ಯ ಕಲ್ಪನೆಯನ್ನು ರೂಪಿಸುತ್ತದೆ. ಪ್ರಪಂಚವನ್ನು ಆಳ್ವಿಕೆ ಮಾಡಿದ ಬಿಳಿಯರಿಗಿಂತ ಆಫ್ರಿಕಾದ ನೀಗ್ರೋಗಳು ಜಗತ್ತನ್ನು ಆಳಿದ್ದರೇ ಪರಿಣಾಮವೇ ಬೇರೆಯಾಗಿರುತ್ತಿತ್ತು... ಋಗ್ವೇದದಲ್ಲಿ ಶ್ವೇತವರ್ಣವನ್ನೇ ಆರ್ಯ ಎಚಿದು ಕರೆದಿದೆ. ಪ್ರಪಂಚದಲ್ಲೇ ಬಿಳಿಯರ ಮೇಲಾಟ ಪರಂಪರೆಯನ್ನೇ ಸೃಷ್ಟಿಸಿರುವ ಕಾರಣವಾಗಿ ಶ್ವೇತವರ್ಣಕ್ಕೆ ವಿರೋಧ ಕಾಣದ ಪ್ರತಿಷ್ಠೆ ದೊರಕಿಬಿಟ್ಟಿದೆ. ಬಣ್ಣ ತಾನೇ ಚೆಲುವಿಕೆಯೆನಿಸಿಕೊಂಡುಬಿಟ್ಟಿದೆ. ಬಹುಪಾಲು ಇನ್ನಾವುದೇ ಸಹಗುಣವನ್ನು ಬೇಡದೇ."4

ಲೋಹಿಯಾರವರ ಈ ಮಾತುಗಳನ್ನು ಜಾತಿ ವ್ಯವಸ್ಥೆಗೂ ಹಾಗೂ ಬಣ್ಣಕ್ಕೂ ಇರುವ ಸಂಬಂಧದ ಸ್ವರೂಪದ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ. ಹಾಗೆಯೇ ವಸಾಹತೀಕರಣ ಮತ್ತು ಜಾಗತೀಕರಣಗಳು ಸಮಾಜದಲ್ಲಿ ಉಂಟುಮಾಡುತ್ತಿರುವ ವರ್ಣ ತಾರತಮ್ಯದ ಪರಿಣಾಮದ ಭಾಗವಾಗಿಯೂ ಗ್ರಹಿಸಬೇಕಿದೆ. ಬಣ್ಣದ ತಾರತಮ್ಯಕ್ಕೆ ಈಡಾದ ಹೆಣ್ಣು ಮತ್ತು ಕೆಳಜಾತಿಗಳಿಗೂ ಒಂದು ಸಂಬಂಧವಿದ್ದು ಇವರನ್ನು ವ್ಯವಸ್ಥಿತವಾಗಿ ಹತ್ತಿಕ್ಕುತ್ತಿರುವ ಪಿತೃಪ್ರಧಾನ ವ್ಯವಸ್ಥೆಯ ಹುನ್ನಾರಗಳು ತುಂಬಾ ಸೂಕ್ಷ್ಮವಾಗಿರುವುದನ್ನು ಗಮನಿಸಬೇಕಿದೆ. ಒಟ್ಟಿನಲ್ಲಿ ಇಂದಿನ ಕೃಷಿ, ಕೈಗಾರಿಕೆಗಳ ಮೇಲೆ ಹಿಡಿತ ಸಾಧಿಸುತ್ತಿರುವ ಜಾಗತೀಕರಣ, ಮುಕ್ತಮಾರುಕಟ್ಟೆಯಿಚಿದಾಗಿ ಉದ್ಯೋಗದ ಸ್ವರೂಪ ಮತ್ತು ಬದುಕಿನ ಶೈಲಿಯಲ್ಲಿ ಪಲ್ಲಟಗಳು ತಲೆದೋರಿವೆ. ಆದ್ದರಿಂದಾಗಿಯೇ ಧಾರಾವಾಹಿಗಳಲ್ಲಿಯೂ ಏಕರೂಪಿ ಕೆಲಸಗಳು, ಏಕರೂಪಿ ಬಣ್ಣದ ಶ್ರೇಷ್ಠತೆ, ಏಕರೂಪಿ ಜೀವನಕ್ರಮಗಳು, ಏಕರೂಪಿಯಾದ ಭಾಷೆ ಹಾಗೂ ಏಕರೂಪಿ ಸಮಾಜವೊಂದರ ಸಂಕೀರ್ಣ ಚಿತ್ರಣಗಳು ಪ್ರಧಾನವಾಗಿ ಬಿಂಬಿಸಲ್ಪಟ್ಟಿರುವುದು ಕಂಡುಬರುತ್ತದೆ. ಇದರಿಂದಾಗಿ ಬಹುಮುಖಿ ಸಮಾಜದ ಸಾಂಸ್ಕೃತಿಕ ಚಹರೆಗಳು ದಮನಿಸಲ್ಪಟ್ಟು, ಯಜಮಾನಿಕೆಯ ಬೇರುಗಳು ಮತ್ತಷ್ಟು ಗಟ್ಟಿಗೊಳ್ಳುತ್ತಿರುವುದರ ಸಂದರ್ಭದ ಚಿತ್ರಣಗಳಾಗಿ ಧಾರಾವಾಹಿಗಳು ಕಂಡುಬರುತ್ತಿವೆ.

## ಗ್ರಂಥ ಪರಾಮರ್ಶನ

1. ಡಾ. ಬಿ.ಜಿ. ಕಲಾವತಿ, ಮಂಟಪಮಾಲೆ: ಮಾಧ್ಯಮ ಮತ್ತು ಮಹಿಳೆ – 189, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಡಾ. ಬಿ.ಜಿ. ಕಲಾವತಿ: ಮಾಧ್ಯಮ ಮತ್ತು ಮಹಿಳೆ
3. ಶಾಂತಾ ನಾಗರಾಜ್: ಟಿ.ವಿ. ಧಾರಾವಾಹಿಗಳಲ್ಲಿ ಮಹಿಳೆ ಮತ್ತು ಮೌಲ್ಯ. ಹೊಸತು ವಿಶೇಷ ಸಂಚಿಕೆ 2003, ನವಕರ್ನಾಟಕ ಪ್ರಕಟಣೆ.
4. ರಾಮ ಮನೋಹರ ಲೋಹಿಯಾ: "Beauty and Skin Colour".

(ಅನುವಾದ :'ಸೌಂದರ್ಯ ಮತ್ತು ಮೈಬಣ್ಣ' – ಕೆ.ವಿ. ಸುಬ್ಬಣ್ಣನವರ ಆಯ್ದ ಬರಹಗಳು)